ಶ್ರೀ ಪಿ. ಜಿ ಆರ್. ಸಿಂಧ್ಯಾ.—ನೆಮ್ಮಲ್ಲಿ ೩ನೇ ದರ್ಜೆ ವೈದ್ಯರಿದ್ದಾರೆ, ಅವರಲ್ಲಿ ಒಬ್ಬರನ್ನು ಸಧ್ಯದಲ್ಲೇ ನೇಮಕ ಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ. ಆದರೆ ಲೋಕಸೇವಾ ಆಯೋಗದಿಂದ ನೇಮಕವಾಗಿರತಕ್ಕ ವೈದ್ಯರನ್ನು ನಿಯಮದ ಪ್ರಕಾರ ನೇಮಿಸುವುದಕ್ಕಾಗುವುದಿಲ್ಲವೆಂದು ನೇಮಕ ಮಾಡಿಲ್ಲ. ಎಲ್ಲಿ ಮಾಡಬಹುದೋ ಅಲ್ಲಿ ಮಾಡಿದ್ದೇವೆ.

ಶ್ರೀ ಎಸ್.ಪಿ. ಗಂಗಾಧರಪ್ಪ.— ಈ ಜನವರಿ ತಿಂಗಳೊಳಗೆ ಎಲ್ಲ ಆಸ್ಪತ್ರೆಗಳಿಗೂ ವೈದ್ಯರನ್ನು ಭರ್ತಿ ಮಾಡುತ್ತೇವೆಂದು ಹೇಳಿದ್ದಿರಿ. ಆ ರೀತಿ ಮಾಡಿದ್ದೀರಾ? ಯಾವಾಗ ಮಾಡುತ್ತೀರಿ?

ಅಧ್ಯಕ್ಷರು.— ಸಾಧ್ಯವಾದಷ್ಟು ಶೀಘ್ರವಾಗಿ ಮಾಡುತ್ತೇವೆಂದು ಹೇಳುತ್ತಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.— ಜನವರಿ ತಿಂಗಳಲ್ಲಿ ರಾಜ್ಯದಲ್ಲಿರತಕ್ಕ ಬಹುತೇಕ ಎಲ್ಲ ಆಸ್ಪತ್ರೆಗಳಿಗೂ ವೈದ್ಯರನ್ನು ನೇಮಿಸುತ್ತೇವೆಂದು ಕಳೆದ ಸಾರಿ ಇಲಾಖೆಯ ಬೇಡಿಕೆಗಳ ಚರ್ಚೆಯ ಸಂಬಂಧದಲ್ಲಿ ಹೇಳಿದ್ದೆ. ಆದೇ ರೀತಿ, ೧೯೮೩–೮೪ನೇ ಸಾಲಿನಲ್ಲಿ ನಾವು ೬೨೩ ಜನ ವೈದ್ಯರನ್ನು ನೇಮಿಸಿದ್ದೇವೆ. ೩೨೩ ಜನ ವೈದ್ಯರನ್ನು ಮೊನ್ನೆ ನೇಮಕ ಮಾಡಿದ್ದೇವೆ. ೩೭೬ ಮಂದಿ ಮಹಿಳಾ ವೈದ್ಯರನ್ನು ಮತ್ತು ೫೬ ಜನ ದಂತ ವೈದ್ಯರನ್ನು ನೇಮಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಅವರಿಗೆ ಸಂದರ್ಶನ ಕೂಡ ನಡೆಯುತ್ತಿದೆ. ಈಗಾಗಲೇ ೬೨೩ ಮಂದಿ ವೈದ್ಯರನ್ನು ಬಹುತೇಕ ಆಸ್ಪತ್ರೆಗಳಿಗೆ ನೇಮಿಸಿ ಅವರಿಗೆಲ್ಲ ಒಂದು ವಾರದೊಳಗೆ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಬೇಕೆಂದು ಹೇಳಿದ್ದೇವೆ.

ಸರ್ಕಾರದ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇರುವ ವಿಚಾರ

೬೩. (೧೦೨) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸರ್ಕಾರದವರ ಪ್ರತಿ ಇಲಾಖೆಯಲ್ಲಿಯೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲ ವರ್ಗದ ಹುದ್ದೆಗಳು ಖಾಲಿ ಇರುವುದರಿಂದ ಸರ್ಕಾರದವರ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯಲು ಅಡ್ಡಿಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವ ಕೈಗೊಂಡಿರುವ ಕ್ರಮ ಗಳೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳು ಸುಮಾರು ೪೬,೫೦೦ ಎಂಬುದಾಗಿ ಅಂದಾಜು ಮಾಡಲಾಗಿದೆ. ಇಲಾಖಾವಾರು ಖಾಲಿ ಹುದ್ದೆಗಳ ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ಸೂಚಿಸಲಾಗಿದೆ.

ಆ) ಕೆಲವು ಹುದ್ದೆಗಳು ಖಾಲಿ ಇರುವುದರಿಂದ ಸರ್ಕಾರದ ಕೆಲಸಕಾರ್ಯಗಳಿಗೆ ಸ್ವಲ್ಪಮಟ್ಟಿಗೆ ಅಡ್ಡಿ ಉಂಟಾಗಿರಬಹುದು.

ಇ) ಈಗಾಗಲೇ ಸುಮಾರು ೬೭ ನೇಮಕಾತಿ ಸಮಿತಿಗಳನ್ನು ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ರಚಿಸಲಾಗಿದೆ. ಲೋಕಸೇವಾ ಆಯೋಗವು ಖಾಲಿ ಇರುವ ಸಹಾಯಕ/ಪ್ರಥಮದರ್ಜೆ, ಕಿರಿಯ ಸಹಾಯಕ/ಎರಡನೇ ದರ್ಜೆ ಗುಮಾಸ್ತರುಗಳ ಹುದ್ದೆಗಳಿಗೆ ಅರ್ಜಿಯನ್ನು ಕರೆದಿದೆ ಮತ್ತು ಇಷ್ಟರಲ್ಲಿಯೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಪರೀಕ್ಷೆಯನ್ನು ನಡೆಸಲಿದೆ.

ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳನ್ನು ಸೂಚಿಸುವ ಪಟ್ಟಿ

ಕ್ರಮ ಸಂಖ್ಯೆ	ಇಲಾಖೆಯ ಹೆಸರು	ಖಾಲಿ ಹುದ್ದೆಗಳ ಸಂಖ್ಯೆ	
೧	೨	೩	೪
	ಕೃಷಿ ಮತ್ತು ಪಶುಸಂಗೋಪನ		
೧.	ಕೃಷಿ	೨,೬೨೭	
೨.	ಪಶುಸಂಗೋಪನ ಮತ್ತು ಪಶು ವೈದ್ಯಕೀಯ ಸೇವೆಗಳು	೨,೧೪೭	
೩.	ತೋಟಗಾರಿಕೆ	೬೨೬	
೪.	ವಿಸ್ತಾನುಗಾರಿಕೆ	೧೪೪	
		——	೫,೫೪೪
	ವಾಣಿಜ್ಯ ಮತ್ತು ಕೈಗಾರಿಕೆ		
೧.	ಕೈಗಾರಿಕೆ ಮತ್ತು ವಾಣಿಜ್ಯ	೪೦೯	
೨.	ರೇಷ್ಮೆ	೧,೧೯೪	
೩.	ಗಣಿ ಮತ್ತು ಭೂವಿಜ್ಞಾನ	೨೮೬	
೪.	ಸರಕು ಖರೀದಿ	೬	
೫.	ಸಕ್ಕರೆ ನಿರ್ದೇಶನಾಲಯ	೧	
		——	೧,೯೯೬
	ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ		
೧.	ಸಹಕಾರ	೪೨೭	
೨.	ಅಭಿವೃದ್ಧಿ	೨೨	
೩.	ಮಾರುಕಟ್ಟೆ	೪೧೨	
೪.	ಸಹಕಾರ ಲೆಕ್ಕಪತ್ರ	೫೯೪	
೫.	ತೂಕ ಮತ್ತು ಅಳತೆ	೧೧೫	
೬.	ಸಾರ್ವಜನಿಕ ಆರೋಗ್ಯ ಇಂಜಿನೀಯರಿಂಗ್	೬೭೦	
		——	೨,೨೪೪
	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ		
೧.	ಸೇವೆಗಳು	೭	
೨.	ಸೇವೆಗಳು (ಕೆ.ಎ.ಎಸ್.) ಅಧೀನ ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು	೧೦	
೩.	ಆಡಳಿತ ಸುಧಾರಣೆ	೪೫	
೪.	ಸೇವಾ ನಿಯಮಗಳು (ಕರ್ನಾಟಕ ರಾಜ್ಯ ಜಾಗೃತ ಆಯೋಗ)	೬೯	

೫.	ಆಡಳಿತ ಮತ್ತು ಸಿಬ್ಬಂದಿ	೫೪೫	
೬	ಸಾಮಾನ್ಯ	೩	
೭.	ಕಾರ್ಯಕಾರಿ	೬೮	
		———	೭೪೭

ಆಹಾರ ಮಂತ್ತು ಅರಣ್ಯ

೧.	ಆಹಾರ ಮತ್ತು ನಾಗರೀಕ ಸರಬರಾಜು	೨೭೧	
೨.	ಅರಣ್ಯ	೯೩೪	
		———	೧,೨೦೫

ಕಾನೂನಂ ಮತ್ತು ಸಂಸದೀಯ ವ್ಯವಹಾರಗಳು

೧.	ಭಾಷಾಂತರ	೧೭	
೨.	ಪ್ರಾಸಿಕ್ಯೂಷನ್	೧೪೭	
೩.	ನ್ಯಾಯಾಂಗ	೧,೨೫೫	
		———	೧,೪೧೭

ಆರ್ಥಿಕ

೧.	ವಾಣಿಜ್ಯ ತೆರಿಗೆ	೨೭೫	
೨.	ರಾಜ್ಯ ಲೆಕ್ಕಪತ್ರ	೭೮೪	
೩.	ಖಜಾನೆ	೨೧೮	
೪.	ಕರ್ನಾಟಕ ರಾಜ್ಯ ವಿಮಾ ಇಲಾಖೆ	೨೦೦	
೫.	ಸಣ್ಣ ಉಳಿತಾಯ ಮತ್ತು ಲಾಟರಿ	೩೦	
		———	೧,೫೦೭

ಯೋಜನೆ

೧:	ಆರ್ಥಿಕ ಮತ್ತು ಸಂಖ್ಯಾಸ್ಥಿತಿ ವಿಭಾಗ	೩೮೦	
೨.	ಕರ್ನಾಟಕ ರಾಜ್ಯ ಕಂಪ್ಯೂಟರ್ ಕೇಂದ್ರ	೪೭	
		———	೪೨೭

ವಿಜ್ಞಾನ ಮತ್ತು ತಾಂತ್ರಿಕ

೧.	ಯೋಜನೆ ಇಲಾಖೆ	ಇಲ್ಲ	

ವಸತಿ ಮತ್ತು ನಗರಾಭಿವೃದ್ಧಿ

೧.	ನಗರ ಯೋಜನೆ ಇಲಾಖೆ	೩೧೨	
		———	೩೧೨

ಒಳಾಡಳಿತ

೧.	ಕಾರಾಗೃಹ	೩೧೦	
೨.	ಮೋಟಾರು ವಾಹನ	೨೪೧	
೩.	ಅಗ್ನಿಶಾಮಕ	೩೦೮	

೪.	ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ	೨೭	
೬.	ಅಬಕಾರಿ	೩೦೫	
೭.	ಗೃಹ ರಕ್ಷಕರು	೧೦೬	
೫.	ಆರಕ್ಷಕರು	೨,೫೬೮	
		———	೩,೮೬೫

ಕಂದಾಯ

೧.	ಸೇವೆಗಳು	೧,೪೫೮	
೨.	ಕರ್ನಾಟಕ ಅಫೀಲು ವಿಚಾರಕ ನ್ಯಾಯಾಧಿಕರಣ	೧೪	
೩.	ಭೂಮಾಪನ ಮತ್ತು ಭೂದಾಖಲೆ ಇಲಾಖೆ	೪೮೩	
೪.	ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್	೫೫	
೫.	ಮುಜರಾಯಿ	೩೬	
		———	೨,೦೪೬

ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ

೧.	ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆ	೯.೭೬೮	೯,೭೬೮

ಆರೋಗ್ಯ ಮತ್ತು ಕುಟುಂಬ ಕಲ್ಯಾಣ

೧.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ನಿರ್ದೇಶನಾಲಯ	೫,೧೯೪	
೨.	ವೈದ್ಯಕೀಯ ಶಿಕ್ಷಣದ ನಿರ್ದೇಶನಾಲಯ	೨೨೯	
೩.	ಭಾರತೀಯ ವೈದ್ಯಕೀಯ ಪದ್ಧತಿ	೨೯೯	
೪.	ಔಷಧ ನಿಯಂತ್ರಣ	೭೦	
		———	೫,೭೯೨

ವಿದ್ಯಾ

೧.	ವಯಸ್ಕರ ಶಿಕ್ಷಣ	೪೬
೨.	ತಾಂತ್ರಿಕ ಶಿಕ್ಷಣ	೫೫೮
೩.	ಮುದ್ರಣ, ಲೇಖನ ಮತ್ತು ಪ್ರಕಟಣೆ	೩೧೪
೪.	ಆರ್ಕಿಯಾಲಜಿ ಮತ್ತು ಮ್ಯೂಸಿಯಂಗಳು	೧೨೯
೫.	ಯುವಜನ ಸೇವೆ ಮತ್ತು ಕ್ರೀಡೆ	೧೮
೬.	ರಾಜ್ಯ ಗೆಜೆಟ್ಟೀರ್	೨೮
೭.	ವೃತ್ತಿ ಶಿಕ್ಷಣ ತರಬೇತಿ	೪
೮.	ನ್ಯಾಷನಲ್ ಕ್ಯಾಡೆಟ್ ಕಾರ್ಪ್ಸ್	೩೯
೯.	ಪದವಿ ಪೂರ್ವ ಶಿಕ್ಷಣ	೨೪
೧೦.	ಗಣಿ ಶಿಕ್ಷಣ ಶಾಲೆ	೧೬

೧೧.	ಸಂಶೋಧನ ಮತ್ತು ತರಬೇತಿ	೧೦	
೧೨.	ಗ್ರಂಥಾಲಯ	೮೪	
೧೩.	ಕನ್ನಡ ಮತ್ತು ಸಂಸ್ಕೃತಿ	೧೯	
೧೪.	ಪ್ರೌಢ ಶಿಕ್ಷಣ ಮಂಡಳಿ	೨೬	
೧೫.	ಸಾರ್ವಜನಿಕ ಶಿಕ್ಷಣ	೬,೫೪೧	
೧೬.	ಫ್ಲೈಯಿಂಗ್ ಟ್ರೈನಿಂಗ್ ಶಾಲೆ	೧೬	
೧೭.	ಕಾಲೇಜು ಶಿಕ್ಷಣ	೭೨೮	
		——	೮,೬೦೦

ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು

೧.	ಪ್ರವಾಸೋದ್ಯಮ	೨೨	೨೨
	ಜೀವಿ ಪರಿಸರ ವಿಜ್ಞಾನ ಮತ್ತು ಪರಿಸರ	೪೫	೪೫
	ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ	೨,೬೨೩	೨,೬೩೨
	ಒಟ್ಟು	——	೪೮,೦೬೦
	ಇದರಲ್ಲಿ ಸಹಾಯಕರು ಪ್ರಥಮದರ್ಜೆ ಗುಮಾಸ್ತರುಗಳ ಹುದ್ದೆಗೆ ನವೆಂಬರ್–ಡಿಸೆಂಬರ್ ೧೯೮೩ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆಯನ್ನು ಕಳೆದು	೧,೯೫೦	
		——	೪೬,೪೨೦

ಶ್ರೀ ಬಿ. ಬೈರಪ್ಪಾಜಿ.—ಮುಖ್ಯಮಂತ್ರಿಗಳು ೪೬,೫೦೦ ಹುದ್ದೆಗಳು ಖಾಲಿ ಇವೆ ಎಂದು ಹೇಳಿದರು. ಇದನ್ನು ನೋಡಿದರೆ ಅನೇಕ ವರ್ಷಗಳಿಂದ ಹುದ್ದೆಗಳು ಖಾಲಿ ಇವೆ ಎಂಬುದು ಖಚಿತವಾಗುತ್ತದೆ. ಅಲ್ಲದೆ, ಇದರಿಂದ ಸರ್ಕಾರದ ಕೆಲಸಕಾರ್ಯಗಳು ಬಹುಮಟ್ಟಿಗೆ ಕುಂಠಿತವಾಗಲಿವೆ. ಆದರೆ ತಾವು ಸ್ವಲ್ಪಮಟ್ಟಿಗೆ ಕುಂಠಿತವಾಗಿದೆ ಎಂದು ಹೇಳಿದ್ದೀರಿ. ಸಿಬ್ಬಂದಿ ಇಲ್ಲದೆ ಕೆಲಸಕಾರ್ಯಗಳು ಪೂರ್ಣವಾಗಿ ಕುಂಠಿತವಾಗಿಲ್ಲವೆ ಎಂದು ಕೇಳುತ್ತೇನೆ. ೬೭ ಇಲಾಖಾ ನೇಮಕಾತಿ ಸಮಿತಿಗಳನ್ನು ನೇಮಿಸಿದ್ದೇವೆಂದು ಹೇಳಿದ್ದೀರಿ. ಆ ಸಮಿತಿಗಳು ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುತ್ತಿವೆಯೆ? ಅವುಗಳಲ್ಲಿ ನೇಮಿಸಿರತಕ್ಕ ಖಾಸಗಿ ಸದಸ್ಯರ ಅರ್ಹತೆ ಏನು? ಅವರನ್ನು ಯಾವ ಆಧಾರದ ಮೇಲೆ ನೇಮಿಸಿದ್ದೀರಿ? ಈಗಾಗಲೇ ನೇಮಕಾತಿ ಸಮಿತಿಗಳಲ್ಲಿ ಅನೇಕ ಲೋಪದೋಷಗಳು, ಭ್ರಷ್ಟಾಚಾರಗಳು ನಡೆಯುತ್ತಿವೆ ಎಂದು ಪತ್ರಿಕೆಗಳಲ್ಲಿ ಓದಿದ್ದೇನೆ. ಅದು ತಮ್ಮ ಗಮನಕ್ಕೂ ಬಂದಿರಬಹುದು. ಅಲ್ಲದೆ, ತಾವು ಕೂಡ ಹೇಳಿದ್ದೀರಿ, ಅಂಥ ಭ್ರಷ್ಟಾಚಾರಿಗಳು ಕಂಡುಬಂದರೆ ಅವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡುತ್ತೇವೆ ಎಂದು. ಅದನ್ನು ಯಾವರೀತಿ ಮಾಡುತ್ತೀರಿ?

ಶ್ರೀ ರಾಮಕೃಷ್ಣ ಹೆಗಡೆ.—೧೯೭೯ರ ಡಿಸೆಂಬರ್ ನಂತರ ಮೊನ್ನೆಮೊನ್ನೆಯವರೆಗೆ ಯಾವುದೇ ಸರ್ಕಾರಿ ಹುದ್ದೆಗೆ ನೇಮಕಾತಿ ಕೆಲಸ ನಡೆದಿಲ್ಲ. ಬೈರಪ್ಪಾಜಿಯವರು ಎರಡು ವರ್ಷಗಳ ಹಿಂದೆ ಈ ಪ್ರಶ್ನೆಯನ್ನು ಕೇಳಿದ್ದರೆ ಚೆನ್ನಾಗಿತ್ತು. ಸರ್ಕಾರದ ಕೆಲಸ ಕುಂಠಿತವಾಗಿದೆ ಎಂಬ ಬಗ್ಗೆ ಸಂದೇಹವಿಲ್ಲ. ಇಷ್ಟೊಂದು ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಸರ್ಕಾರದ ಕೆಲಸ ಹೇಗೆ ಸರಾಗವಾಗಿ ನಡೆಯಬೇಕು. ನಾನು ಸೌಮ್ಯ ರೀತಿಯಿಂದ ಉತ್ತರಿಸಿದ್ದೇನೆ. ಹೊಸ ಸರ್ಕಾರ ಬಂದಮೇಲೆ ಹುದ್ದೆಗಳನ್ನು ಭರ್ತಿ ಮಾಡಲು ೬ ತಿಂಗಳು ಆತಂಕ ಇತ್ತು. ಅದು ಸ್ಪೃಪೆಂಡರಿ ಪದವೀಧರರು ಹೈಕೋರ್ಟಿಗೆ ಹೋಗಿದ್ದರಿಂದ ಸರ್ಕಾರೀ ನೇಮಕಾತಿಗೆ ತೊಂದರೆಯಾಯಿತು. ಹೈಕೋರ್ಟಿನವರು ಒಂದು ತೀರ್ಮಾನ ಕೊಟ್ಟು ಹುದ್ದೆಗಳನ್ನು ಭರ್ತಿ ಮಾಡುವಾಗ ಸ್ಥಳೀಯ ಅಭ್ಯರ್ಥಿಗಳು ಮತ್ತು ಸ್ಪೃಪೆಂಡರಿ ಪದವೀಧರರಿಗೆ ಶೇಕಡ ೫೦ರಷ್ಟು ಹುದ್ದೆಗಳನ್ನು ಮೀಸಲಾಗಿಡಬೇಕೆಂದರು. ಆದಾದಮೇಲೆ ಈಗಾಗಲೇ ೨೨–೨೩ ಸಾವಿರ ಹುದ್ದೆಗಳಿಗೆ ಅರ್ಜಿಗಳನ್ನು ಕರೆದು ನೇಮಕಾತಿ ಕೆಲಸ ನಡೆದಿದೆ. ಲೋಕಸೇವಾ ಆಯೋಗದಿಂದ ಮತ್ತು ನಾವು ನೇಮಕ ಮಾಡಿದ ನೇಮಕಾತಿ ಸಮಿತಿಗಳಿಂದ ಸುಮಾರು ಐದು ಅಥವಾ ಆರು ಸಾವಿರ ಹುದ್ದೆಗಳಿಗೆ ಈಗಾಗಲೇ ನೇಮಕಾತಿಗಳು ಆಗಿವೆ.

ನೇಮಕಾತಿ ಸಮಿತಿಗಳ ಸದಸ್ಯರ ಅರ್ಹತೆ ಏನು ಎಂದು ಕೇಳಿದ್ದಾರೆ. ಅವರಿಗಿರಬೇಕಾದ ಅರ್ಹತೆ ಏನೆಂದರೆ ಪ್ರಾಮಾಣಿಕತೆ ಇರಬೇಕು, ಮತ್ತು ಯಾವ ಖಾತೆಗೆ ಸಂಬಂಧಪಟ್ಟಂತೆ ನೇಮಕಾತಿ ನಡೆಯುತ್ತದೋ ಆ ಖಾತೆಯ ಬಗ್ಗೆ ಸ್ವಲ್ಪ ಮಟ್ಟಿನ ಜ್ಞಾನ ಇರಬೇಕು. ಅವರೇನೂ ಎಕ್ಸ್‌ಪರ್ಟ್ಸ್ ಎಂದು ನಾನು ಹೇಳುವುದಿಲ್ಲ. ಸದಸ್ಯರ ಪೈಕಿ ಭ್ರಷ್ಟಾಚಾರದ ದೂರುಗಳು ಬಂದಿದೆಯೇ ಎಂದು ಮಾನ್ಯ ಬೈರಪ್ಪಾಟಿಯವರು ಕೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಪುನಃ ಇಲ್ಲಿ ಸ್ಪಷ್ಟಪಡಿಸ ಸಯಸುತ್ತೇನೆ. ನೇಮಕಾತಿ ಸಮಿತಿಯ ಯಾವುದೇ ಒಬ್ಬ ಸದಸ್ಯರ ವಿರುದ್ಧ ಭ್ರಷ್ಟಾಚಾರದ ದೂರಿದ್ದರೆ ತಕ್ಷಣ ಆ ಸದಸ್ಯರ ಸದಸ್ಯತ್ವವನ್ನು ರದ್ದು ಮಾಡುತ್ತೇವೆ. ಈಗಾಗಲೇ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದೇನೆ. ಇದು ಎರಡನೇ ವಿಚ್ಚರಿಕೆ. ನಮ್ಮ ಸರ್ಕಾರದ ಧೋರಣೆ ಮತ್ತೆ ನೀತಿ ಏನೆಂದರೆ ಭ್ರಷ್ಟಾಚಾರ ಯಾವ ಹಂತದಲ್ಲೂ, ಯಾವ ಇಲಾಖೆಯಲ್ಲೂ ಇರಕೂಡದು ಎಂಬುದು. ಯಾವುದೋ ಒಂದು ಸಮಿತಿಯ ಸದಸ್ಯರ ಬಗ್ಗೆ ಕೆಲವು ದಿವಸಗಳ ಹಿಂದೆ ನನಗೆ ಲಿಖಿತವಾದ ದೂರು ಬಂತು: ಆ ಸಮಿತಿಯ ಸದಸ್ಯರು ದುಡ್ಡನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು. ತಕ್ಷಣ ಆ ಕಮಿಟಿಯ ಎಲ್ಲ ಸದಸ್ಯರನ್ನೂ ವಜಾ ಮಾಡಿ ಹೊಸ ಸದಸ್ಯರನ್ನು ನೇಮಕ ಮಾಡಿದ್ದೇವೆ. ಬೇರೆ ಕಮಿಟಿಯ ಸದಸ್ಯರ ವಿರುದ್ಧ ಅದೇ ರೀತಿ ದೂರು ಬಂದರೆ ಸದಸ್ಯತ್ವವನ್ನು ವಜಾ ಮಾಡುವುದಷ್ಟೇ ಅಲ್ಲ ಬೇರೆ ರೀತಿಯ ಕ್ರಮವನ್ನೂ ಅವರ ಮೇಲೆ ತೆಗೆದುಕೊಳ್ಳುತ್ತೇವೆ. ಸಮಿತಿಯಲ್ಲಿ ಸದಸ್ಯರಾಗಲು ಅರ್ಹತೆಗೆ ಸಂಬಂಧಪಟ್ಟಂತೆ ಮತ್ತೊಂದು ವಿಚಾರ ಏನೆಂದರೆ ಹರಿಜನಗಿರಿಜನ ವರ್ಗಕ್ಕೆ ಸೇರಿದವರೊಬ್ಬರು, ಹಿಂದುಳಿದ ವರ್ಗಕ್ಕೆ ಸೇರಿದವರೊಬ್ಬರು ಮತ್ತು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರೊಬ್ಬರು ಕಮಿಟಿಯಲ್ಲಿರಬೇಕೆಂಬುದು ನಮ್ಮ ನೀತಿಯಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಸ್ಟೈಫಂಡರಿ ಪದವೀಧರರು ೧೫ ಸಾವಿರ ಜನರಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರು ಹಂಗಾಮಿಯಾಗಿ ಕೆಲಸ ಮಾಡುತ್ತಿರುವವರು ೭ ಸಾವಿರ ಜನರಿದ್ದಾರೆ. ಅವರಲ್ಲದೆ ಇನ್ನೂ ಕೆಲವು ಕಡೆ ಹಂಗಾಮಿಯಾಗಿ ಕೆಲಸ ಮಾಡತಕ್ಕವರು ಅನೇಕ ಇಲಾಖೆಗಳಲ್ಲಿದ್ದಾರೆ, ಅವರನ್ನು ಬಿಟ್ಟು ೪೬ ಸಾವಿರ ಹುದ್ದೆಗಳು ಖಾಲಿ ಇವೆಯೇ ಅಥವಾ ಅವರ ಹುದ್ದೆಗಳೂ ಸೇರಿ ೪೬ ಸಾವಿರ ಹುದ್ದೆಗಳು ಖಾಲಿ ಇವೆಯೇ? ಸ್ಟೈಫಂಡರಿ ಪದವಿ ಧರರ ಕೂಗು ಪದೇಪದೇ ಕೇಳಿಬರುತ್ತಿದ್ದು ಅವರಿಂದ ಕೆಲಸ ಕೂಡ ಸರಿಯಾಗಿ ಆಗುತ್ತಿಲ್ಲ. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಹಣ ಜಾಸ್ತಿ ಖರ್ಚಾಗುತ್ತಿದೆಯೇ ವಿನಹ ಸರ್ಕಾರದ ಕೆಲಸ ಆಗುವುದಕ್ಕೆ ಅಡ್ಡಿ ಆತಂಕಗಳು ಬರುತ್ತಿವೆ. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರನ್ನು ಜಿಲ್ಲಾ ನೇಮಕಾತಿ ಸಮಿತಿಯವರು ಮತ್ತು ಡಿ.ಡಿ.ಪಿ.ಐ.ರವರು ಕಾನೂನು ಪ್ರಕಾರವಾಗಿ ನೇಮಕ ಮಾಡಿಕೊಂಡಿದ್ದಾರೆ. ಆದ್ದರಿಂದ ಅವೆಲ್ಲರನ್ನೂ ಖಾಯಂ ಮಾಡಿ ಕೆಲಸ ಸುಸ್ಥೂತವಾಗಿ ನಡೆಯುವಂತೆ ಏತಕ್ಕೆ ವ್ಯವಸ್ಥೆ ಮಾಡಬಾರದು? ಈ ಬಗ್ಗೆ ಸರ್ಕಾರದ ಖಚಿತ ನಿಲುವೇನು?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಸ್ಟೈಫಂಡರಿ ಪದವೀಧರರ ಸಮಸ್ಯೆಯಾಗಲೀ, ಅಥವಾ ತಾತ್ಕಾಲಿಕವಾಗಿ ನೇಮಕಗೊಂಡ ಅಭ್ಯರ್ಥಿಗಳ ಸಮಸ್ಯೆಯಾಗಲೀ ಈ ಸರ್ಕಾರ ಬಂದಮೇಲೆ ಹುಟ್ಟಿದ್ದಲ್ಲ. ಕಳೆದ ಆರೆಂಟು ವರ್ಷಗಳಿಂದ ಸ್ಟೈಫಂಡರಿ ಪದವೀಧರರನ್ನು ಹಿಂದಿನ ಸರ್ಕಾರ ನೇಮಕ ಮಾಡಿತ್ತು. ಹಿಂದಿನ ಸರ್ಕಾರ ಅವರನ್ನು ಖಾಯಂಗೊಳಿಸುವುದಕ್ಕೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಹೈಕೋರ್ಟಿನಿಂದ ಆಗಿರುವ ನಿರ್ಣಯದ ಅಡಚಣೆಯೂ ನಮಗಿದೆ. ಹಿಂದೆ ಈ ವಿಚಾರದಲ್ಲಿ ಒಬ್ಬರು ಹೈಕೋರ್ಟಿಗೆ ಹೋಗಿದ್ದು ತಾತ್ಕಾಲಿಕವಾಗಿ ನೇಮಕಗೊಂಡಂಥ ಅಭ್ಯರ್ಥಿಗಳನ್ನು ಖಾಯಂಗೊಳಿಸಬಾರದು ಮತ್ತು ಇನ್ನು ಮುಂದೆ ತಾತ್ಕಾಲಿಕವಾಗಿ ನೇಮಕಾತಿಯನ್ನೂ ಮಾಡಬಾರದು ಎಂಬ ಅರ್ಥದಲ್ಲಿ ಹೈಕೋರ್ಟಿನವರು ಒಂದು ನಿರ್ಣಯ ಕೊಟ್ಟಿದ್ದಾರೆ. ಸ್ಟೈಫಂಡರಿ ಪದವೀಧರರ ಸಮಸ್ಯೆ, ತಾತ್ಕಾಲಿಕವಾಗಿ ನೇಮಕಗೊಂಡ ಸರ್ಕಾರಿ ನೌಕರರ ಸಮಸ್ಯೆ ನಮಗೆ ಗೊತ್ತುಂಟು. ಅದಕ್ಕೆಂತ ಹೆಚ್ಚಾಗಿ ಉದ್ಯೋಗ ಇಲ್ಲದೇ ಇರುವ ಲಕ್ಷಾಂತರ ಜನ ನಿರುದ್ಯೋಗಿ ಪದವೀಧರರ ಸಮಸ್ಯೆಯೂ ನಮಗೆ ಗೊತ್ತುಂಟು. ಸ್ಟೈಫಂಡರಿ ಪದವೀಧರರಿಗೆ ತಿಂಗಳಿಗೆ ೨೦೦ ರೂಪಾಯಿ ಮೊದಲು ಸಿಗುತ್ತಿತ್ತು. ಈ ಹಣದಲ್ಲಿ ಅವರು ಸ್ವತಂತ್ರವಾಗಿ ಜೀವನ ಮಾಡುವುದು ಸಾಧ್ಯವಾಗುತ್ತಿರಲಿಲ್ಲ. ಅನೇಕ ಜನರು ನೌಕರಿ ಖಾಯಂ ಆಗುತ್ತದೆ ಎಂದು ಆಸೆ ಇಟ್ಟುಕೊಂಡು ಮದುವೆಯಾಗಿದ್ದಾರೆ. ಅವರಲ್ಲಿ ಕೆಲವರಿಗೆ ಮಕ್ಕಳೂ ಆಗಿವೆ. ಈ ಸ್ಟೈಫಂಡರಿ ನೌಕರರಿಗೆ ಮೊದಲು ನಿರ್ದಿಷ್ಟವಾದ ಜವಾಬ್ದಾರಿಯೂ ಇರಲಿಲ್ಲ. ಈ ಎಲ್ಲವನ್ನೂ ಗಮನಿಸಿ ಸರ್ಕಾರ ಮೊನ್ನೆತಾನೆ ಒಂದು ನಿರ್ಣಯ ತೆಗೆದುಕೊಂಡಿದೆ. ಶೇಕಡ ೫೦ರಷ್ಟು ಸ್ಟೈಫಂಡರಿ ಪದವೀಧರರು ಮತ್ತು ತಾತ್ಕಾಲಿಕವಾಗಿ ನೇಮಕಗೊಂಡಿರುವ ಸರ್ಕಾರಿ ನೌಕರರಿಗೆ ಮುಂದಿನ ನೇಮಕಾತಿಗಳಲ್ಲಿ ಅವಕಾಶ ಸಿಗುತ್ತದೆ. ಆದರೂ ಅಷ್ಟು ಜನರಿಗೂ ನೌಕರಿ ಸಿಗುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಬರುವ ತಿಂಗಳಿಂದ

ಅವರ ಸಂಬಳವನ್ನು ೩೫೦ ರೂಪಾಯಿಗಳಿಗೆ ಹೆಚ್ಚಿಸುವ ತೀರ್ಮಾನ ತೆಗೆದುಕೊಂಡಿದ್ದೇವೆ. ಅಷ್ಟೇ ಅಲ್ಲದೆ ಅವರಿಗೆ ವಿಶಿಷ್ಟವಾದ ಜವಾಬ್ದಾರಿಯನ್ನೂ ಕೊಡುತ್ತಿದ್ದೇವೆ. ಸಂಬಳ ಕೊಟ್ಟ ಮೇಲೆ ಅವರ ಮೇಲೆ ಸರಿಯಾದ ಜವಾಬ್ದಾರಿ ನಿಗದಿ ಮಾಡಿ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಅಕ್ಷರ ಸೇನೆ. ಅಂದರೆ ಸಾಕ್ಷರತೆ ಕೆಲಸದಲ್ಲಾಗಲೀ ಅಥವಾ ಸೋಷಿಯಲ್ ಫಾರೆಸ್ಟ್ರಿ ವಿಚಾರದಲ್ಲಾಗಲೀ, ಆರೋಗ್ಯ ಇಲಾಖೆ ಕೆಲಸದಲ್ಲಾಗಲೀ ಅಥವಾ ಯಾವುದೇ ಇಲಾಖೆಗೆ ಸಂಬಂಧಪಟ್ಟ ಕೆಲಸದಲ್ಲಾಗಲೀ ವಿಶಿಷ್ಟವಾದ ಜವಾಬ್ದಾರಿ ಕೊಟ್ಟು ಅವರಿಂದ ಕೆಲಸ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಪ್ರಾಥಮಿಕ ಶಾಲಾ ಶಿಕ್ಷಕರ ವಿಚಾರವನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅವರು ಹೇಳಿದ್ದು ನಿಜ. ಬಹಳಷ್ಟು ಶಿಕ್ಷಕರನ್ನು ಹಿಂದೆ ನೇಮಕ ಮಾಡಿದ್ದಾರೆ. ಈ ವಿಚಾರದಲ್ಲಿ ರಿಸರ್ವೇಷನ್‌ಗೆ ಸಂಬಂಧಪಟ್ಟಂತೆ ರೋಸ್ಟರ್ ಪದ್ಧತಿಯನ್ನೂ ಕೂಡ ಅವರು ಫಾಲೋ ಮಾಡಿದ್ದಾರೆ. ಆದರೂ ಅವರನ್ನು ಇದ್ದಕ್ಕಿದ್ದ ಹಾಗೆ ಖಾಯಂ ಮಾಡುವುದಕ್ಕೆ ಅಧಿಕಾರ ಇಲ್ಲ. ನಮಗೆ ಮಾಡಬೇಕು ಎಂಬ ಇಷ್ಟ ಇದ್ದರೂ ಕಾಯಿದೆಯ ಅಡಚಣೆ ಇರುವುದರಿಂದ ಅದನ್ನು ಮಾಡಲಿಕ್ಕೆ ಬರುವುದಿಲ್ಲ. ನನ್ನ ಸ್ಮರಣೆ ಸರಿಯಿದ್ದರೆ, ಈ ವಿಷಯದಲ್ಲಿ ಹೈಕೋರ್ಟಿಗೆ ಕೂಡ ಕೆಲವರು ಹೋಗಿರುವುದುಂಟು.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಇಲಾಖಾ ಸಮಿತಿಗಳು ನಮಗೆ ತಿಳಿದ ಪ್ರಕಾರ ಎಕಪಕ್ಷೀಯವಾಗಿದೆ. ನಾನ್-ಆಫಿಷಿಯಲ್ ಸದಸ್ಯರನ್ನಾಗಿ ಜನತಾ ಪಕ್ಷ ಅಥವಾ ಸರ್ಕಾರಕ್ಕೆ ಬೆಂಬಲ ಕೊಡತಕ್ಕ ಇತರ ಪಕ್ಷದ ಸದಸ್ಯರನ್ನು ಆ ಕಮಿಟಿಯಲ್ಲಿ ಸೇರಿಸಿದ್ದಾರೆ. ನಾನ್-ಆಫಿಷಿಯಲ್ ಸದಸ್ಯರನ್ನಾಗಿ ನೇಮಕ ಮಾಡುವುದಕ್ಕೆ ಜನತಾ ಪಕ್ಷದ ಪಟ್ಟಿ, ಬಿಜೆಪಿ ಸದಸ್ಯರ ಪಟ್ಟಿ ಮತ್ತು ಇನ್ನಿತರ ಪಕ್ಷಕ್ಕೆ ಸೇರಿದ ಪಕ್ಷದವರ ಪಟ್ಟಿ ಇಟ್ಟುಕೊಂಡಿದ್ದಾರೆಂದು ದೂರು ಬಂದಿದೆ. ೫೦ ಅಂಕಗಳಲ್ಲಿ ೪೦ ಅಂಕಗಳನ್ನು ಅಕಡೆಮಿಕ್ ಕೋರ್ಸಿಗೆ ಸಂಬಂಧಪಟ್ಟಂತೆ ಇಟ್ಟಿದ್ದರೆ ಜನತಾ ಪಕ್ಷ ಮತ್ತು ಆದಕ್ಕೆ ಬೆಂಬಲ ನೀಡುತ್ತಿರುವ ಪಕ್ಷಗಳ ಸದಸ್ಯರ ಕಡೆಯವರಿಗೆ ೩೦-೪೦ ಅಂಕಗಳನ್ನು ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಇದರಿಂದ ಅಲ್ಲಿ ರಾಜಕೀಯ ನಡೆಯುತ್ತಿರುವುದರ ಜೊತೆಗೆ ಭ್ರಷ್ಟಾಚಾರದ ದೂರುಗಳೂ ಬಂದಿವೆ. ರಾಜಕೀಯ ಭ್ರಷ್ಟಾಚಾರ ಮತ್ತು ಪಕ್ಷ ರಾಜಕಿಯದಿಂದ ನೇಮಕಾತಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಈ ರೀತಿಯಾದರೆ ನೇಮಕಾತಿಗೆ ಬರುವ ಮುಗ್ಧ ಅಭ್ಯರ್ಥಿಗಳಿಗೆ ಒಂದು ರೀತಿಯ ನಿರಾಶೆ ಮತ್ತು ಉಪೇಕ್ಷೆ ಭಾವನೆ ಬರುವುದಿಲ್ಲವೆ?

ಶ್ರೀ ರಾಮಕೃಷ್ಣ ಹೆಗಡೆ.—ನನ್ನ ಹತ್ತಿರ ಆ ರೀತಿಯ ದೂರುಗಳು ಬಂದಿಲ್ಲ. ನನಗೆ ಪತ್ರ ಬಂದಿದೆ, ಆ ಕಮಿಟಿಯಲ್ಲಿ ಕಾಂಗ್ರೆಸ್ (ಐ) ಸದಸ್ಯರೇ ಹೆಚ್ಚಾಗಿದ್ದಾರೆ ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ರೀತಿ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನನಗೆ ಪತ್ರ ಬಂದಿವೆ. ಸದಸ್ಯರ ಅರ್ಹತೆಯಲ್ಲಿ ಅವರು ಯಾವ ಪಕ್ಷಕ್ಕೆ ಸೇರಿದವರು ಎಂಬುದು ಮುಖ್ಯವಲ್ಲ. ಅಕಸ್ಮಾತ್ತಾಗಿ ಕೆಲವರು ಜನತಾ ಪಕ್ಷಕ್ಕೆ ಸೇರಿದವರು ಇರಬಹುದು: ಇನ್ನು ಕೆಲವರು ಬಿ.ಜೆ.ಪಿ. ಪಕ್ಷಕ್ಕೆ ಸೇರಿದವರು ಇರಬಹುದು. ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ (ಐ ಪಕ್ಷಕ್ಕೆ ಸೇರಿದವರು ಇರಬಹುದು. ಇನ್ನು ಕೆಲವು ಜನ ಯಾವುದೇ ಪಕ್ಷಕ್ಕೆ ಸೇರದೇ ಇರುವವರಿರಬಹುದು. ನನಗೆ ಪತ್ರ ಬಂದಿದೆ, ಕಾಂಗ್ರೆಸ್ (ಐ)ನವರನ್ನೇ ಹಾಕಿದ್ದಾರಿ ಎಂದು. ಮಾನ್ಯ ವಿರೋಧಪಕ್ಷದ ನಾಯಕರು ಏನು ಆಪಾದನೆ ಮಾಡಿದ್ದಾರೆ ಅದರಲ್ಲಿ ಯಾವ ಆಧಾರವೂ ಇಲ್ಲ, ಹುರುಳೂ ಇಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ತಾವು ಮಾತನಾಡುತ್ತಾ ಒಂದು ವಿಷಯ ಹೇಳಿದಿರಿ.

ಅಧ್ಯಕ್ಷರು.—ಪ್ರಶ್ನೆ ಕೇಳಿ. ಈಗಾಗಲೇ ೧೫ ನಿಮಿಷ ಆಯಿತು.

ಶ್ರೀ ಎಂ ಎಸ್. ಕೃಷ್ಣನ್ —ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂಧಪಟ್ಟಂತೆ ಸ್ಥಳೀಯ ಅಭ್ಯರ್ಥಿಗಳ ವಿಚಾರದಲ್ಲಿ ಹೈಕೋರ್ಟ್ ತೀರ್ಮಾನದಿಂದ ಅಡ್ಡಿ ಆತಂಕಗಳಿವೆ ಎಂದು ಹೇಳಿದ್ದಿರಿ. ಹೈಕೋರ್ಟಿನ ತೀರ್ಮಾನಕ್ಕೆ ವಿರುದ್ಧವಾಗಿ ಹೋಗದೇ ಇರುವ ರೀತಿಯಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ಕನ್‌ಫರ್ಮ್ ಮಾಡಬಹುದು ಎಂದು ವಿದ್ಯಾ ಇಲಾಖೆಯಿಂದ ವರದಿ ಬಂದಿಲ್ಲವೆ? ಆ ರೀತಿ ವರದಿ ಬಂದಿದ್ದರೆ ಸರ್ಕಾರದ ನಿರ್ಧಾರವನ್ನು ಪುರ್ನವಿಮರ್ಶೆ ಮಾಡುತ್ತೀರಾ? ರೋಸ್ಟರ್ ಸಿಸ್ಟಂ ಪ್ರಕಾರ ಮತ್ತು ಟಿ.ಸಿ.ಎಚ್. ಪರೀಕ್ಷೆ ಪಾಸು ಮಾಡಿರುವ ಅಭ್ಯರ್ಥಿಗಳನ್ನು ಖಾಯಂ ಮಾಡುವವಿಚಾರದಲ್ಲಿ ಪುರ್ನವಿಮರ್ಶೆ ಮಾಡುವುದಕ್ಕೆ ತಾವು ಭರವಸೆ ಕೊಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ಈ ವಿಚಾರದಲ್ಲಿ ನಾನು ಮೊದಲೇ ಹೇಳಿದೆ. ಯಾವ ಯಾವ ಖಾತೆಯಲ್ಲಿ ಯಾವ ಯಾವ ಅಭ್ಯರ್ಥಿಗಳನ್ನು ನಮ್ಮ ರಿಸರ್ವೇಷನ್ ಪಾಲಿಸಿ ಪ್ರಕಾರ ರೋಸ್ಟರ್ ಸಿಸ್ಟಮ್‌ನ್ನು ಫಾಲೋ ಮಾಡಿ ನೇಮಕ ಮಾಡಿದ್ದಾರೆ ಅವರನ್ನು ಖಾಯಂ ಮಾಡುವುದಕ್ಕೆ ಆಕ್ಷೇಪ ಏನು ಇಲ್ಲ. ಅವರಿಗೆ ಪುನಃ ಇಂಟರ್‌ವ್ಯೂ ಮಾಡಿ, ಅವರಿಗೆ ಖರ್ಚು ಮಾಡಿಸಿ ಮತ್ತೆ ಅವರಿಗೆ ಕೆಲಸ ಕೊಡುವುದರಲ್ಲಿ ಅರ್ಥವಿಲ್ಲ. ಆದರೆ ಹೈಕೋರ್ಟ್ ಆಜ್ಞೆ ಪ್ರಕಾರ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ಈ ಜನ ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ನೇಮಕ ಮಾಡಿಕೊಳ್ಳುವ ಬಗ್ಗೆ ಮಾನ್ಯ ವಿದ್ಯಾ ಸಚಿವರು ಒಂದು ಯೋಜನೆ ಮಾಡಿದ್ದರು. ಅವರು ಕಾಂಟ್ರಾಕ್ಟ್ ಬೇಸಿಸ್‌ಮೇಲೆ ತೆಗೆದುಕೊಂಡು ಮಾಡಬಹುದೆಂದು ಹೇಳಿದರು. ಅದೂ ಕೂಡಾ ಸಾಧ್ಯವಿಲ್ಲವಾಗಿದೆ.

ಡಾ ।। ವಿ. ಎಸ್. ಆಚಾರ್ಯ.—ಅಧ್ಯಕ್ಷರೆ, ರಾಜ್ಯದಲ್ಲಿ ೪೬೫೦ ಹುದ್ದೆಗಳು ಖಾಲಿ ಇದೆಯೆಂದು ತಿಳಿದುಬಂದಿದೆ. ಇದರಲ್ಲಿ ಜಿಲ್ಲಾವಾರು ಖಾಲಿ ಇರುವ ಸಂಖ್ಯೆ ಎಷ್ಟು ಹಾಗೂ ಜಿಲ್ಲಾವಾರು ಪ್ರಾತಿನಿಧ್ಯ ಕೊಟ್ಟು ಯಾವ ಜಿಲ್ಲೆಯಲ್ಲಿ ಹೆಚ್ಚು ಖಾಲಿ ಹುದ್ದೆಗಳು ಇವೆ ಅವನ್ನು ತುಂಬುವುದಕ್ಕೆ ಪ್ರಯತ್ನ ಪಡುತ್ತೀರಾ? ಈಗ ಡಿ.ಎಲ್.ಆರ್.ಪಿ. ನಲ್ಲಿ ೫೦ ಅಂಕಗಳನ್ನು ನಿಗದಿ ಪಡಿಸಿದ್ದೀರಿ. ಈಗ ಈ ಮೂಲಕ ನಡೆಯುತ್ತಿರುವ ಸಂದರ್ಶನದಲ್ಲಿ ೧೦ ಅಥವಾ ೧೫ ಮಾರ್ಕ್ಸ್ ಹಾಗೂ ೪೦ ಅಥವಾ ೪೫ ಮಾರ್ಕ್ಸ್ ಈ ರೇಂಜಿನಲ್ಲೇ ಕೊಟ್ಟುಕೊಂಡು ಬಂದಿದ್ದಾರೆ. ಯಾರಿಗೂ ೨೦ ಅಥವಾ ೨೫ ಮಾರ್ಕ್ಸ್‌ರೇಂಜಿನಲ್ಲಿ ಅಂಕಗಳನ್ನು ಕೊಟ್ಟಿರುವುದಿಲ್ಲ. ಈ ತಾರತಮ್ಯ ತಪ್ಪಿಸಲು ೧೦ ಅಂಕಗಳನ್ನು ಮಾತ್ರ ಇದಕ್ಕೆ ನಿಗದಿ ಮಾಡುತ್ತೀರಾ ? ಈ ಒಂದು ತಾರತಮ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ನಾವು ಎಷ್ಟೇ ಮಾರ್ಕ್ಸ್ ಇಟ್ಟರೂ ಕೂಡಾ ಇದನ್ನು ನಿಸ್ಪಕ್ಷಪಾತವಾದ ರೀತಿಯಿಂದ ಮಾಡದೇ ಇದ್ದರೆ ಈ ರೀತಿ ಆಗುವುದಕ್ಕೆ ಸಾಧ್ಯವಿದೆ. ಹಾಗೂ ಈ ಬಗ್ಗೆ ಮಾರ್ಕ್ಸ್‌ನ್ನು ಇಡದೇ ಇದ್ದರೂ ಆಕ್ಷೇಪ ಮಾಡುತ್ತೀರಿ. ಆದುದರಿಂದ ಯಾವುದೇ ಒಂದು ಮಾರ್ಗವನ್ನು ಅನುಸರಿಸಲೇಬೇಕಾಗುತ್ತದೆ. ಇರುವುದರಲ್ಲಿ ಯೋಗ್ಯ ಮಾರ್ಗವನ್ನು ನಾವು ಅನುಸರಿಸುತ್ತಿದ್ದೇವೆ. ಹಾಗೂ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಖಾಲಿ ಸಂಖ್ಯೆಗಳು ಇವೆ ಎಂದು ಕೇಳಿದ್ದೀರಿ. ಆ ಒಂದು ಅಂಕಿಸಂಖ್ಯೆಯ ಆಧಾರದ ಮೇಲೆ ಹೊಸದಾಗಿ ನೇಮಕ ಆದ ಜನರನ್ನು ಅಲ್ಲಿ ನೇಮಿಸುತ್ತೇವೆಂದು ನಾನು ಹೇಳುತ್ತೇನೆ.

ಶ್ರೀ ದೊಡ್ಡಬೋರೇಗೌಡ.–ಅಧ್ಯಕ್ಷರೇ, ಮಂಡ್ಯಾ ಜಿಲ್ಲೆಯ ಜಿಲ್ಲಾಮಟ್ಟದ ನೇಮಕಾತಿ ಸಮಿತಿಗೆ ೬ ಜನ ಕಾಂಗ್ರೆಸ್ (ಐ) ಸಕ್ರಿಯ ಪಾತ್ರದಾರಿಗಳನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಹಾಗೂ ರಾಜ್ಯ ಮಹಿಳಾ ಮಂಡಲಿಗೆ ಕಾಂಗ್ರೆಸ್ (ಐ) ಪಕ್ಷದ ಕಾರ್ಯದರ್ಶಿಣಿಯವರನ್ನು ಹಾಕ ಲಾಗಿದೆ. ಹಾಗೂ ಆರ್. ಟಿ. ಒ.ಗೆ ಒಬ್ಬ ಕಾಂಗ್ರೆಸ್ (ಐ) ವರ್ಕರ್‌ನ್ನು ಮೆಂಬರ್ ಆಗಿ ಹಾಕ ಲಾಗಿದೆ. ಇವರು ಜಿಲ್ಲಾ ಮಟ್ಟದ ಅಧ್ಯಕ್ಷರೂ ಆಗಿದ್ದಾರೆ. ಇವರನ್ನೆಲ್ಲಾ ಮಾನ್ಯ ಮುಖ್ಯಮಂತ್ರಿಗಳೇ ನೇಮಕ ಮಾಡಿದ್ದಾರೆಯೇ ಎಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಷಯವನ್ನು ಕೇಳಿ ವಿರೋಧಪಕ್ಷದ ನಾಯಕರಿಗೆ ಬಹಳ ಸಮಾಧಾನ ಆಗಿರಬಹುದೆಂದು ನಾನು ನಂಬಿದ್ದೇನೆ.

ಮಾಗಡಿ ತಾಲ್ಲೂಕಿಗೆ ಜನರಲ್ ಆಸ್ಪತ್ರೆಯ ಮಂಜೂರಾತಿ

೬೪ (೧೩೮) ಶ್ರೀ ಹೆಚ್. ಜಿ. ಚಿನ್ನಪ್ಪ (ಮಾಗಡಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮಾಗಡಿ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆ ಮಂಜೂರಾಗಿದೆಯೇ; ?

ಆ) ಹಾಗಿದ್ದಲ್ಲಿ ಸದರಿ ಆಸ್ಪತ್ರೆಗೆ ಒದಗಿಸಿದ ಸೌಲಭ್ಯಗಳೇನು ?

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಕಟ್ಟಡವು ಮುಗಿದ ನಂತರ ಹೆಚ್ಚುವರಿ ಸಿಬ್ಬಂದಿ ಮತ್ತು ಇತರೆ ಸೌಲಭ್ಯಗಳನ್ನು ಸರ್ಕಾರಿ ನಿಯಮಾವಳಿಯ ಪ್ರಕಾರ ಒದಗಿಸಲಾಗುವುದು.